VIJAYAKUMAR KANNUR
Digitally signed by VIJAYAKUMAR KANNUR
Date: 2025.12.19 10:48:40 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 18.12.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀಮತಿ ಎಸ್ ಬಿ ಪಿ ವಕೀಲರಿಂದ :**

ಈ ದಾವೆಯ ಬಗ್ಗೆ ನನಗೆ ಎಲ್ಲಾ ಮಾಹಿತಿ ಇರುವುದು. ನಾನು ಪ್ರತಿವಾದಿ 2 ವಿನ ಮಗನಾಗಿರುವೆನು ಎಂದರೆ ಸರಿ. ದಸ್ತಗಿರಿಯೆಪ್ಪ ನನ್ನ ತಾಯಿಯ ತಂದೆಯಾಗಬೇಕು. ವೆಂಕವ್ವ ಇವಳು ಅಜ್ಜಿಯಾಗಬೇಕು. ಇವರು ಈಗ ಮೃತ ಪಟ್ಟು ಸುಮಾರು 10 ವರ್ಷ ಗಳಾಗಿರಬಹುದು. ಇವರಿಗೆ ವಾದಿ, ಪ್ರತಿವಾದಿ 1 ರಿಂದ 4 ರವರು ಮಕ್ಕಳಾಗಿರುವರು ಎಂದರೆ ಸರಿ.

2. ದಾವಾ ಷೆಡ್ಯೂಲ್ 'ಎ' ದ ಆಸ್ತಿಗಳು ಮೃತ ದಸ್ತಗಿರಿಯೆಪ್ಪನ ಆಸ್ತಿಗಳು ಎಂದರೆ ಸರಿ. ಇತ ಮೃತ ಪಟ್ಟ ನಂತರ ವಾರಸಾನಾತೆಯಿಂದ ವಾದಿ, ಪ್ರತಿವಾದಿ 1 ರಿಂದ 4 ರವರು ಹೆಸರುಗಳು ದಾಖಲಾಗಿರುವವು ಎಂದರೆ ಸರಿಯಲ್ಲ, ಪ್ರತಿವಾದಿ 2 ಮತ್ತು 4 ರವರ ಹೆಸರಗಳನ್ನು ಮಾತ್ರ ದಾಖಲು ಮಾಡಿಸಿರುವರು. ಈ ದಾವಾ ಆಸ್ತಿಗಳಿಗೆ ಪ್ರತಿವಾದಿ 2 ಮತ್ತು 4 ರವರ ಹೆಸರು ದಾಖಲಾದ ಬಗ್ಗೆ ಪಹಣಿ ಪತ್ರಿಕೆಯನ್ನು ಹಾಜರು ಪಡಿಸಿರುವೆನು.

3. ಪ್ರತಿವಾದಿ 2 ಮತ್ತು 4 ರವರು ಈ ದಾವೆಯಲ್ಲಿ ತಮ್ಮ ತಕರಾರು ಸಲ್ಲಿಸಿರುವರು ಎಂದರೆ ಸರಿ. ಪ್ರತಿವಾದಿ 2 ನನ್ನ ಜೊತೆಯಲ್ಲಿಯೇ ವಾಸವಾಗಿರುವಳು ಎಂದರೆ ಸರಿ. ಪ್ರತಿವಾದಿ ತನ್ನ ವಕೀಲರ ಹತ್ತಿರ ಹೋಗಿ ಈ ದಾವೆಯ ಬಗ್ಗೆ ಮಾಹಿತಿ ನೀಡಿದ ಸಂಗತಿಗಳು ನನಗೆ ಗೊತ್ತಿರುವುದು. ನನ್ನನ್ನು ಈ ದಾವೆಯಲ್ಲಿ ಪ್ರತಿವಾದಿಯನ್ನಾಗಿ ಸೇರ್ಪಡೆ ಮಾಡಿದ ನಂತರ ನಾನು ನನ್ನ ಲಿಖಿತ ಪತ್ರ ಸಲ್ಲಿಸಿರುವೆನು. ನನ್ನ ಲಿಖಿತ ಪತ್ರದ ಖಂಡಿಕೆ 2 ರಲ್ಲಿ ಬರೆಸಿ ಹಾಕಿರುವ ಸಂಗತಿಗಳಿಗೆ ಸಂಬಂಧಪಟ್ಟಂತೆ ಪಹಣಿ ಪತ್ರಿಕೆ ಹಾಜರು ಪಡಿಸಿರುವೆನು. ದಸ್ತಗಿರಿಯೆಪ್ಪ ಯಾವುದೇ ದಾಖಲೆ ಮಾಡದೆ ಮೃತ ಪಟ್ಟಿರುವುದಾಗಿ ಎಂದು ನಾನು ನನ್ನ

ಲಿಖಿತ ಪತ್ರ ಖಂಡಿಕೆ 2 ರಲ್ಲಿ ಸುಳ್ಳು ಹೇಳಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ಪಹಣಿ ಪತ್ರಿಕೆಯನ್ನು ಹೊರತು ಪಡಿಸಿ ನಾನು ಬೇರೆ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ.

4. ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಖಂಡಿಕೆ 2 ರಲ್ಲಿ ಬರೆಸಿರುವ ಸಂಗತಿಗಳು ನಿಜವಿರುವವು. ವಾದಿಯ ವಿವಾಹ ಯಾವ ವರ್ಷದಲ್ಲಿ ಆಗಿರುವುದು ಎಂದು ನನಗೆ ಹೇಳಲು ಬರುವುದಿಲ್ಲ. ವಾದಿಯ ವಿವಾಹವಾದಾಗ ನನಗೆ ಸುಮಾರು 15 ವರ್ಷಗಳಾಗಿರಬಹುದು. ವಾದಿಯು ಪ್ರತಿವಾದಿ 1 ಮತ್ತು 3 ರವರಿಗೆ ವಿವಾಹದ ಸಮಯದಲ್ಲಿ ಎಷ್ಟು ಹಣ ಮತ್ತು ಬಂಗಾರ ಕೊಟ್ಟಿರುವರು ಎಂದು ನನಗೆ ಹೇಳಲು ಆಗುವುದಿಲ್ಲ. ಈ ಬಂಗಾರ, ಹಣ ನೀಡಿದ ಬಗ್ಗೆ ಲಿಖಿತ ರೂಪದಲ್ಲಿ ಯಾವುದೇ ದಾಖಲಾತಿ ಇರುವುದಿಲ್ಲ. ಯಾವುದೇ ಹಣ ಮತ್ತು ಬಂಗಾರ ನೀಡದೇ ಇದ್ದರೂ ಸಹಿತ ಇವರಿಗೆ ನೀಡಿರುವುದಾಗಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ದಸ್ತಗಿರಿಯೆಪ್ಪ ಮನೆತನದ ದಾವಾ ಷೆಡ್ಯೂಲ್ 'ಎ' ಆಸ್ತಿಗಳಲ್ಲಿ ಪಾಲು ವಾಟ್ನಿಯು ಪ್ರತಿವಾದಿ 2 ಮತ್ತು 4 ರವರ ಮಧ್ಯೆಯಾಗಿರುವುದು. ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಕುಟುಂಬದ ಮೂಲ ಪುರುಷ ಮೃತ ಪಟ್ಟ ನಂತರ ಆತನ ಕಾನೂನು ಬದ್ಧವಾದ ವಾರಸುದಾರರ ಮಧ್ಯೆ ಯಾವುದೇ ಪಾಲು ವಾಟ್ನಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಈ ಪಾಲು ವಾಟ್ನಿಯು ಉಪನೊಂದಣಿ ಕಚೇರಿಯಲ್ಲಿ ನೊಂದಣಿಯಾಗಲೀ ಮತ್ತು ನ್ಯಾಯಾಲಯದಲ್ಲಿ ಪಾಲು ವಾಟ್ನಿಯ ಡಿಕ್ರಿಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ಪಾಲು ವಾಟ್ನಿಯಾಗದೇ ಇರುವುದರಿಂದ ವಾದಿಗೆ 1/5 ಹಿಸ್ಸೆ ಇರುವುದು ಎಂದರೆ ಸರಿಯಲ್ಲ. ವಾದಿ ಈ ದಾವೆ ದಾಖಲು ಮಾಡಿದ ಪ್ರತಿವಾದಿ 2 ಮತ್ತು 4 ರವರು ಕೂಡಿಕೊಂಡು ಈ ದಾವೆಯ ವಾದಿ ಮತ್ತು ಉಳಿದ ಪ್ರತಿವಾದಿಯರಿಗೆ ಗೊತ್ತಾಗದ ಹಾಗೆ ದಿಃ 04.01.2023 ರಂದು ದಾವಾ ಆಸ್ತಿ ಸರ್ವೇ ನಂಬರ್ 9/2 ರ ಆಸ್ತಿಯಲ್ಲಿ ಪಾಲು ವಾಟ್ನಿ ಮಾಡಿಕೊಂಡಿರುವರು ಎಂದರೆ ಸರಿಯಲ್ಲ. ಈ ವಾಟ್ನಿಯು ವಾದಿಗೆ ಯಾವುದೇ ರೀತಿಯಿಂದ ಬಂಧನಕಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ಈ ಆಸ್ತಿಯಲ್ಲಿ ಹಕ್ಕು ನೀಡಬಾರದು ಎಂಬ ಕಾರಣಕ್ಕೆ ನನ್ನ ತಾಯಿ ಪ್ರತಿವಾದಿ 2 ರವರು ದಿಃ 18.01.2023 ರಂದು

ನನ್ನ ಹೆಸರಿನಲ್ಲಿ ಖೊಟ್ಟಿಯಾದ ಒಂದು ಬಕ್ಷಿಸ್ ಪತ್ರ ಮಾಡಿಕೊಟ್ಟಿರುವಳು ಎಂದರೆ ಸರಿಯಲ್ಲ. ಈ ವಾಟ್ನಿಯು ಹಾಗೂ ಈ ಬಕ್ಷಿಸ್ ಪತ್ರವು ಈ ಆಸ್ತಿಯಲ್ಲಿನ ವಾದಿಯ ಹಕ್ಕಿಗೆ ಬಂಧನಕಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾಖಲೆಯನ್ನು ಖೊಟ್ಟಿಯಾಗಿ ಸೃಷ್ಟಿ ಮಾಡಿಕೊಂಡು ವಾದಿಗೆ ಯಾವುದೇ ಪಾಲು ಇರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ 2 ರಿಂದ 4 ರವರ ಮತ್ತು ಅವರ ವಕೀಲರನ್ನು ಕೂಗಿಸಲಾಯಿತು, ನ್ಯಾಯಾಲಯದಲ್ಲಿ ಹಾಜರು ಇರದ ಕಾರಣ ಅವರ ಪರವಾಗಿ ಯಾವುದೇ ಪಾಟೀ ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ:** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ

VIJAYAKUMAR KANNUR

Digitally signed by VIJAYAKUMAR KANNUR
Date: 2025.12.19 10:48:47 +0530